Local Candidates

13. ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್ (ಸಿರಸಿ).—

ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳ ಬಗ್ಗೆ ಉತ್ತರಿಸುವರೆ ?

(ಎ) ರಾಜ್ಯದಲ್ಲಿ 1-1-1960 ಮತ್ತು 1-1-1965ರ ನಡುವೆ ವಿವಿಧ ಇಲಾಖೆಗಳಲ್ಲಿ ವಿವಿಧ ದರ್ಜೆಗಳಲ್ಲಿ ಹಂಗಾಮಿಯಾಗಿ (ಲೋಕಲ್ ಕ್ಯಾಂಡಿಡೇಟ್ಸ್) ನೇಮಕಮಾಡಿಕೊಂಡು ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ?

(ಬಿ) ಈ ರೀತಿ ಹಂಗಾಮಿಯಾಗಿ ನೇಮಕ ಮಾಡಿಕೊಳ್ಳಲು ಪಟ್ಟಿಯನ್ನು ತರಿಸಿಕೊಳ್ಳುವ ಮುನ್ನ ಆಯಾ ಯೂನಿಟ್ ಆಫೀಸರು ತಮ್ಮ ಯೂನಿಟ್‌ಗೆ ಸಂಬಂಧಿಸಿದ ವೇಕೆನ್ಸಿ ರಿಜಿಸ್ಟರನ್ನು ಸಿದ್ಧಪಡಿಸಿ ಅಲ್ಲಿ ಖಾಲಿ ಬೀಳುವ ಹುದ್ದೆಗಳನ್ನು ವರ್ಗೀಕರಣ ನಿಯಮಗಳಿಗೆ ಅನುಗುಣವಾಗಿ ಒ. ಸಿ. ಶೇಕಡಾ 52, ಬಿ. ಸಿ. ಶೇಕಡಾ 30, ಎಸ್. ಸಿ. ಶೇಕಡಾ 15, ಷೆಡ್ಯೂಲ್ ಕ್ಯಾಸ್ಟ್ ಶೇಕಡಾ 15 ಮತ್ತು ಎಸ್. ಟಿ. ಶೇಕಡಾ 3, ಈ ಕ್ರಮದಲ್ಲಿ ವರ್ಗೀಕರಿಸಿ ಅದಕ್ಕೆ ಅನುಗುಣವಾದ ರೀತಿಯಲ್ಲಿ ಅಭ್ಯರ್ಥಿಗಳ ಪಟ್ಟಿಯನ್ನು ತರಿಸಿಕೊಂಡು ನೇಮಕ ಮಾಡಲಾಗಿದೆಯೇ ;

(ಸಿ) ಆ ರೀತಿ ನೇಮಕವಾಗಿದ್ದರೆ 1-1-1960ರ ಮೊದಲು ನೇಮಕ ಮಾಡಿಕೊಂಡು ಅವರ ಹುದ್ದೆಗಳನ್ನು ಕ್ರಮಗೊಳಿಸಿದಾಗ ಈ ವರ್ಗೀಕರಣ ನಿಯಮ ಪರಿಪಾಲನೆಯಾಗಿದೆಯೇ ಎಂಬುದನ್ನು ಪೂರ್ವಭಾವಿಯಾಗಿ ಪರಿಶೀಲಿಸಲಾಯಿತೇ ;

(ಡಿ) ಆ ರೀತಿ ವರ್ಗೀಕರಣ ನಿಯಮ ಅನುಸರಿಸದೆ, ಹುದ್ದೆಗಳನ್ನು ಯೂನಿಟ್ ಆಫೀಸರು ಭರ್ತಿಮಾಡಿದ್ದರೆ ಅದನ್ನು ಸರಿಪಡಿಸಲು ಮತ್ತು ಭಾರತದ ರಾಜ್ಯಾಂಗ ನಿಯಮಾವಳಿಯ ಪ್ರಕಾರ ಹಿಂದುಳಿದ ವರ್ಗದವರಿಗೆ ಗೊತ್ತಾದ (ಮೀಸಲು) ಪ್ರಾತಿನಿಧ್ಯ ಕೊಡಲು ಸರಕಾರ ಕೈಗೊಂಡಿರುವ ಕ್ರಮಗಳಾವುವು ;

(ಇ) 1-1-1965ರ ಹಿಂದಿನ ಸುಮಾರು 7,566 ಲೋಕಲ್ ಅಭ್ಯರ್ಥಿಗಳ ನೇಮಕವನ್ನು ಈಗ ಕ್ರಮಗೊಳಿಸುವುದಾದರೆ, ಕ್ರಮಗೊಳಿಸುವಾಗ ವರ್ಗೀಕರಣ ನಿಯಮ ಪರಿಪಾಲನೆ ಮಾಡಲಾಗುವುದೇ ? ಹಾಗಾದರೆ ವರ್ಗೀಕರಣ ನಿಯಮದ ಪ್ರಕಾರ ಹಾಲಿ ಕೆಲಸ ಮಾಡುತ್ತಿರುವವರಲ್ಲಿ ಒ. ಸಿ; ಬಿ. ಸಿ; ಎಸ್. ಸಿ. ಮತ್ತು ಎಸ್. ಟಿ. ಇವರುಗಳ ಶೇಕಡಾ ಪ್ರಮಾಣವೆಷ್ಟು ;

(ಎಫ್) 1959ರಲ್ಲಿ ಜಾರಿಗೆ ತಂದ ನಿಯಮಾವಳಿಗೆ ಅನುಗುಣವಾಗಿ ಅರ್ಹರಾದ ಅಭ್ಯರ್ಥಿಗಳು ಗೊತ್ತಾದ ಕಾಲದಲ್ಲಿ ನಿಮ್ಮ ವರ್ಗ, ನಿಮ್ಮ ಪಂಗಡ ಹಾಗೂ ಹಿಂದುಳಿದ ವರ್ಗಗಳಿಂದ ಅಂದರೆ (ಬಿ.ಸಿ.ಎಸ್.ಸಿ.,ಎಸ್.ಟಿ.) ಗೊತ್ತಾದ ಪ್ರಮಾಣದಲ್ಲಿ ದೊರಕದಿದ್ದರೆ, ಅವುಗಳನ್ನು ಮೂರು ವರ್ಷಗಳವರೆಗೆ ಮುಂದುವರಿಸುತ್ತಾ ಅರ್ಹರಾದ ಅಭ್ಯರ್ಥಿಗಳನ್ನು ಪಡೆಯಲು ಪ್ರಯತ್ನ ನಡೆಸಲಾಗಿದೆಯೇ; ಹಾಗಾದರೆ ಆ ಪ್ರಯತ್ನದ ಸಾಧನೆಯೇನು ?

Sri **VEERENDRA PATIL** (Chief Minister).—

(ಎ) ಸುಮಾರು 7,566.

(ಬಿ) ಅಂತಹ ವೇಕೆನ್ಸಿ ರಿಜಿಸ್ಟರುಗಳನ್ನು ತಯಾರಿಸಲು ಎಲ್ಲ ಯೂನಿಟ್ ಆಫೀಸರುಗಳಿಗೂ ಸ್ಥಾಯಿ ಸೂಚನೆಗಳಿವೆ. ಸಾಮಾನ್ಯವಾಗಿ ಈ ಸೂಚನೆಗಳನ್ನು ಪಾಲಿಸಲಾಗಿದೆಯೆಂದು ಭಾವಿಸಲಾಗಿದೆ.

(ಸಿ) ವೈಯುಕ್ತಿಕ ಸಂದರ್ಭಗಳಲ್ಲಿ ಅಂತಹ ಯಾವ ಪರಿಶೀಲನೆಯನ್ನೂ ಮಾಡಿಲ್ಲ.

(ಡಿ) ಸಮಾಜ ಕಲ್ಯಾಣ ಸಂಚಾಲಕಾಲಯಕ್ಕೆ ಸೇರಿದ ನಿಯೋಜನಾ ವಿಭಾಗವು ಯೂನಿಟ್ ಆಫೀಸುಗಳನ್ನು ಪರಿಶೀಲನೆಮಾಡಿದೆ ಮತ್ತು ಯಾವುದೇ ಯೂನಿಟ್ ಆಫೀಸು ಸರ್ಕಾರಿ ಸೂಚನೆಗಳನ್ನು ಪರಿಪಾಲಿಸಿಲ್ಲವೆಂದು ವರದಿ ಮಾಡಿರುವ ಸಂದರ್ಭದಲ್ಲಿ ಸರ್ಕಾರದವರು ಸಂಬಂಧಪಟ್ಟ ಅಧಿಕಾರಿಯ ವಿರುದ್ಧ ಸೂಕ್ತ ಶಿಸ್ತು ಕ್ರಮವನ್ನು ತೆಗೆದುಕೊಳ್ಳುವರು.

(SRI VEERENDRA PATIL)

(ಇ) ಇಲ್ಲ. ವೇಕೆನ್ಸಿಗಳನ್ನು ಕಾದಿಡುವುದು ಪ್ರಾರಂಭಿಕ ಭರ್ತಿಯ ಕಾಲದಲ್ಲಿ ಅನ್ವಯಿಸುತ್ತದೆ.

(ಎಫ್) ಅರ್ಹರಾದ ಅಭ್ಯರ್ಥಿಗಳು ದೊರೆಯದಿದ್ದ ಕಾರಣ ಭರ್ತಿಯಾಗದೆ ಉಳಿದಿರುವ ಮಾನಲು ವೇಕೆನ್ಸಿಗಳನ್ನು ಮುಂದುವರಿಸಿಲ್ಲ.

Bridges Costing more than one lakh in Dharwar District

15. Sri F. S. PATIL (Kalghatgi).—

ಮಾನ್ಯ ರೋಕೋಪಯೋಗಿ ಸಚಿವರು ದಯವಿಟ್ಟು ಈ ವಿಷಯ ತಿಳಿಸುವರೇ :—

ಧಾರವಾಡ ಜಿಲ್ಲೆಯಲ್ಲಿ 1658ನೇ ಇಸವಿಯಿಂದ 1969ನೇ ಇಸವಿ ಮಾರ್ಚ್ ಅಖೈರಿನವರೆಗೆ ಒಂದು ಲಕ್ಷಕ್ಕೂ ಹೆಚ್ಚು ಹಣ ಖರ್ಚುಮಾಡಿ ಕಟ್ಟಿಸಿದಂಥ ಸೇತುವೆಗಳ ಸಂಖ್ಯೆ ಎಷ್ಟು ?

(ತಾಲ್ಲೂಕುವಾರು ಅಂಕೆ ಸಂಖ್ಯೆಗಳನ್ನು ಒದಗಿಸಬೇಕಾಗಿ ವಿನಂತಿ).

Sri K. LAKKAPPA (Minister for Public Works).—

30 Nos.

Talukwar details :—

1.	Dharwar	...	2
2.	Hubli	...	4
3.	Kundgol	...	2
4.	Khalgatgi	...	nil
5.	Ron	...	4
6.	Gadag	...	3
7.	Shirahatti	...	3
8.	Navalgund	...	6
9.	Nargund	...	nil
10.	Mundargi	...	1
11.	Haveri	...	2
12.	Hanagal	...	nil
13.	Hirekerur	...	2
14.	Ranebennur	...	1
15.	Shiggon	...	nil
16.	Byadagi	...	nil
		Total	30